(ಇಂದು ದಿನಾಂಕ 23-09-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ-**

ದಾವಾಸ್ತಿಯಲ್ಲಿ 2-3 ವರ್ಷಗಳಿಂದ ಫಸಲು ಬರುತ್ತಿದೆ ಎಂದು ನೀವು ಯಾವ ಆಧಾರದ ಮೇಲೆ ಹೇಳುತ್ತಿದ್ದಿರಿ ಎಂದರೆ ಸದರಿ ಜಾಗ ನಮ್ಮ ಜಾಗದ ಪಕ್ಕದಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ನಮ್ಮ ಜಾಗದಲ್ಲಿ ಎಷ್ಟು ಹಲಸಿನ ಮರ, ಮತ್ತಿ ಮರ, ಗೇರು ಮರ ಮತ್ತು ಅಕೇಶಿಯಾ ಮರವನ್ನು ಬೆಳೆಸಿದ್ದಿರಾ ಎಂದರೆ ಎಷ್ಟು ಎಂದು ಹೇಳಲು ಬರುವುದಿಲ್ಲ. ನಮ್ಮ ಪಹಣಿಪತ್ರಿಕೆಯಲ್ಲಿ ಸದರಿ ಮರಗಳ ಬಗ್ಗೆ ನಮೂದು ಮಾಡಲು ತೊಂದರೆ ಇತ್ತಾ ಎಂದರೆ ಇರಲಿಲ್ಲ. ಗೇರು ಮರವನ್ನು ಬೆಳೆಸಿ ಸುಮಾರು 25 ವರ್ಷ, ಅಕೇಶಿಯಾ ಮರವನ್ನು ಬೆಳೆಸಿ ಸುಮಾರು 12 ವರ್ಷ, ಮತ್ತಿ ಮರವನ್ನು ಬೆಳೆಸಿ ಸುಮಾರು 20 ವರ್ಷ ಆಗಿದೆ.

ಪ್ರತಿವಾದಿಯರು ನಮ್ಮ ಜಾಗದ 10 ಅಡಿ ಒಳಗಡೆ ಗೇಟನ್ನು ನಿರ್ಮಿಸಿದ್ದಾರೆ. ಪ್ರತಿವಾದಿಯರು ನನ್ನ ಜಾಗದಲ್ಲಿ 8 ವರ್ಷಗಳ ಮೊದಲು ತಂತಿ ಬೇಲಿಯನ್ನು ಹಾಕಿರುತ್ತಾರೆ. ಆ ಸಮಯದಲ್ಲಿ ಪೊಲೀಸರಿಗೆ ಅಥವಾ ನ್ಯಾಯಾಲಯಕ್ಕೆ ಫಿರ್ಯಾದು ನೀಡಲು ಏನಾದರೂ ತೊಂದರೆ ಇತ್ತಾ ಎಂದರೆ ಇರಲಿಲ್ಲ, ಸಾಕ್ಷಿಯು ಮುಂದುವರಿದು ನಾವು ಪ್ರತಿವಾದಿಯರ ಹತ್ತಿರ ತಂತಿ ಬೇಲಿಯ ವಿಚರವಾಗಿ ನೇರವಾಗಿ ಕೇಳಿದಾಗ ಅವರು ಜಾಗವನ್ನು ಸರ್ವೆ ಮಾಡಿ, ಸದರಿ ಜಾಗವು ನಿಮ್ಮದೆಂದು ಕಂಡುಬಂದಲ್ಲಿ ಬಿಟ್ಟುಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ 3 ನೋಟಿಸನ ಪ್ರತಿಯನ್ನು ತೋರಿಸಿದಾಗ ಅದನ್ನು ಸರ್ವೆ ಇಲಾಖೆಯವರು ದಾವಾಸ್ತಿ ಮೋಜಣಿಗೆ ಬರುವ ಪೂರ್ವದಲ್ಲಿ ನನಗೆ ಕೊಟ್ಟ 2 ನೋಟಿಸ್ ಪ್ರತಿಯೆಂದು ಒಪ್ಪಿಕೊಂಡಿದ್ದು, ಅದನ್ನು ನಿ.ಡಿ. 1 ಮತ್ತು ನಿ.ಡಿ.2 ಎಂದು ಗುರುತಿಸಲಾಯಿತು.

ಪಿ.ಡಬ್ಲ್ಯು. 1

ದಿನಾಂಕ 15-03-2018 ರ ನೋಟಿಸ್‌ನಲ್ಲಿ ನಾನು ಅರ್ಜಿದಾರನಾಗಿರುತ್ತೇನೆ. ಪ್ರತಿವಾದಿಗೆ ಲಗ್ತದಾರ ಎಂದು ನೋಟಿಸ್ ಆಗಿರುತ್ತದೆ. ದಿನಾಂಕ 05-10-2018 ರ ನೋಟಿಸ್‌ನಲ್ಲಿ ನಾನು ಅರ್ಜಿದಾರ ಮತ್ತು ಪ್ರತಿವಾದಿ ಲಗ್ತದಾರ ಆಗಿರುತ್ತಾರೆ. ಮತ್ತೊಂದು ನೋಟಿಸ್ ದಿನಾಂಕ 20-01-2018 ರ ನೋಟಿಸ್‌ನಲ್ಲಿ ನಾನು ಅರ್ಜಿದಾರ ಆಗಿದ್ದು ಪ್ರತಿವಾದಿ ಲಗ್ತದಾರ ಆಗಿರುತ್ತಾರೆ.

ನಾನು ಭೂ ಮಾಪನಾ ಅಧಿಕಾರಿಗಳಿಗೆ ಎಷ್ಟು ಸಲ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ನೆನಪಿಲ್ಲ. ನಾನು ಭೂಮಾಪನಾ ಅಧಿಕಾರಿಗಳಿಂದ ಪಡೆದುಕೊಂಡ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿಗೆ ಒಂದು ನಕಾಶೆಯನ್ನು ತೋರಿಸಿದ್ದು ಅದಕ್ಕೆ ಪ್ರತಿವಾದಿಯರು ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಭೂಮಾಪನಾ ಅಧಿಕಾರಿಗಳ ಸಹಿ ಮತ್ತು ಮೊಹರು ಇರುವುದನ್ನು ಒಪ್ಪಿಕೊಂಡಿದ್ದು, ಅದನ್ನು ನಿ.ಡಿ. 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ನಕಾಶೆಯನ್ನು ತೋರಿಸಿದ್ದು ಅದು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಎಂದು ಒಪ್ಪಿಕೊಂಡಿದ್ದು, ಅದನ್ನು ನಿ.ಡಿ. 4 ಎಂದು ಗುರುತಿಸಲಾಯಿತು. ನಾನು ನನ್ನ ದಾವಾ ಸ್ವತ್ತಿನ ಪೋಟೊವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ಇಲ್ಲ.

ನಾನು ನನ್ನ ಜಾಗದ ಪಹಣಿಪತ್ರಿಕೆಯನ್ನು ನೋಡಿರುತ್ತೇನೆ. ಪ್ರತಿವಾದಿಯರ ಜಾಗದ ಪಹಣಿಪತ್ರಿಕೆಯನ್ನು ನೋಡಿರುವುದಿಲ್ಲ. ನನ್ನ ಆಧಾರಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ಹೊಸಕೋಟೆಯಲ್ಲಿದೆ. ಕುಟುಂಬದ ಪಡಿತರ ಚೀಟಿ ಮಾಡಿರುವುದಿಲ್ಲ. ನಾನು ಪ್ರತಿವಾದಿಗೆ ನಿ.ಪಿ.4 ನ್ನು ಹೊರತುಪಡಿಸಿ ಮಾತುಕತೆಗೆ ಕರೆದಿರುವುದಿಲ್ಲ. ನನಗೆ ಕೊಟ್ಟ 2 ನೋಟಿಸ್‌ನಲ್ಲಿ ಯಾವ ದಿನಾಂಕದ ನೋಟಿಸನಲ್ಲಿ ನನ್ನ ಜಾಗ ಅತಿಕ್ರಮಣ ಆಗಿದೆ ಎಂದು ತಿಳಿದು ಬಂದಿತು ಎಂದರೆ ನಿ.ಡಿ.1 ನೋಟಿಸ್‌ನಲ್ಲಿ ತಿಳಿದು ಬಂದಿರುತ್ತದೆ. ನಾನು ನಿ.ಡಿ.1 ಕ್ಕೆ ಮಾತ್ರ ಸಹಿ ಮಾಡಿರುತ್ತೇನೆ.

ಸರ್ವೆ ಇಲಾಖೆಯವರು ಜಾಗಕ್ಕೆ ಬಂದು ಮೋಜಣಿ ಮಾಡಿದ ಬಗ್ಗೆ ನನ್ನಿಂದ ಹಾಗೂ ಲಗ್ತದಾರರಿಂದ ಸಹಿಯನ್ನು ಪಡೆದುಕೊಂಡಿದ್ದಾರಾ ಎಂದರೆ ನಾನು ಸಹಿ ಮಾಡಿರುತ್ತೇನೆ, ನಾನು ಸಹಿ

ಮಾಡುವಾಗ ಪ್ರತಿವಾದಿ ಮತ್ತು ಉಳಿದ ಲಗ್ತದಾರರು ಇದ್ದರು, ಆದರೆ ಅವರು ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮೋಜಣಿದಾರರ ಬಳಿ ಪ್ರತಿವಾದಿ ಮತ್ತು ಲಗ್ತದಾರರು ಸಹಿ ಮಾಡಿದ್ದಾರಾ ಎಂದು ಕೇಳಿರುವುದಿಲ್ಲ. ಸರ್ವೆ ಇಲಾಖೆಯವರು ಜಾಗಕ್ಕೆ ಬಂದು ಮೋಜಣಿ ಮಾಡಿದ ಬಳಿಕ ಎಲ್ಲಾ ಲಗ್ತದಾರರು ಸಹಿ ಮಾಡದಿದ್ದರೆ ಮೋಜಣಿ ಸರಿಯಾಗಿಲ್ಲ ಎಂದರೆ ಸರಿ. ಪ್ರತಿವಾದಿಯವರು ಅವರ ಜಾಗವನ್ನು ಬೇರೆಯವರಿಗೆ ಎಷ್ಟು ಮಾರಾಟ ಮಾಡಿದ್ದಾರೆ ಎಂಬ ಬಗ್ಗೆ ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ಮೊದಲು ಬಾಯಿ ಮಾತಿನಲ್ಲಿ ಹೇಳಿದ್ದು, ನಂತರ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ದಾವಾದಲ್ಲಿ ಹೇಳಿದಂತೆ ವಾಸ್ತವಾಂಶದ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾರಂಭದಿಂದ ಹೊಸಕೋಟೆಯಲ್ಲಿ ವಾಸ್ತವ್ಯ ಇರುವುದರಿಂದ ನನಗೆ ಜಾಗದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಜಾಗದ ಬಗ್ಗೆ ಮಾಹಿತಿ ಇದ್ದಿದ್ದರೆ ಸರಕಾರಿ ರಸ್ತೆಗೆ ಎಷ್ಟು ಜಾಗ ಹೋಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಜಾಗ ಸರಕಾರಿ ರಸ್ತೆಗೆ ಹಾಗೂ ಖರಾಬ ಜಾಗ ಆಗಿ ಹೋಗಿದ್ದು ಗೊತ್ತಿಲ್ಲದೇ ಇರುವುದರಿಂದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಾಗದ ಮಾಹಿತಿ ಗೊತ್ತಿಲ್ಲದೇ ಇರುವುದರಿಂದ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಾಗದ ಬಗ್ಗೆ ಮಾಹಿತಿ ಇದ್ದಿದ್ದೇ ಆಗಿದ್ದರೆ ಎಷ್ಟು ಮರಗಳು ಇವೆ ಎಂದು ಗೊತ್ತಿರುತ್ತಿತ್ತು ಮತ್ತು ಪಹಣಿಪತ್ರಿಕೆಯಲ್ಲಿ ನಮೂದಿಸಿರುತ್ತಿದ್ದಿರಿ ಎಂದರೆ ನಾನು ಮರಗಳ ಬಗ್ಗೆ ಸರಿಯಾಗಿ ಲೆಕ್ಕ ಇಟ್ಟುಕೊಂಡಿಲ್ಲ.ಸದರಿ ವಿಷಯ ನನಗೆ ಗೊತ್ತಿದ್ದೇ ಆಗಿದ್ದರೆ ನಾನು ನ್ಯಾಯಾಲಯಕ್ಕೆ ಬರುವಾಗ ಎಲ್ಲಾ ವಿಷಯಗಳನ್ನು ತಿಳಿಸುತ್ತಿದ್ದೆ ಎಂದರೆ ನಮ್ಮ ವಕೀಲರು ಕೇಳಿರುವ ಮಾಹಿತಿಯನ್ನು ನಾನು ನೀಡಿದ್ದೇನೆ. ನನ್ನ ಆಸ್ತಿಯ ಬಗ್ಗೆ ಹೆಚ್ಚು ಮಾಹಿತಿ ಯಾರಿಗೆ ಇರುತ್ತದೆ ಎಂದರೆ ನನಗೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಾಗದ ಪೂರ್ವ - ಪಶ್ಚಿಮ ಮತ್ತು ಉತ್ತರ - ದಕ್ಷಿಣಕ್ಕೆ ಎಷ್ಟು ಅಡಿ ಉದ್ದ ಮತ್ತು ಅಗಲ ಇದೆ ಎಂದು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಮುಖಾಂತರ ದಾವಾಸ್ತಿಯ ಮೋಜಣಿ ಮಾಡಿಸಲು ತೊಂದರೆ ಇದೆಯಾ ಎಂದರೆ ಮೋಜಣಿ ಮಾಡಿಸಲು ಯಾವುದೇ ಅಭ್ಯಂತರ ಇಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ